# ಪುನರುತ್ಥಾನವು ಏನನ್ನು ಪ್ರಕಟಿಸುತ್ತದೆ

ಮರಣ ಹೂಣಿಡುವಿಕೆ, ಹಾಗೂ ಯೇಸುವಿನ ಪುನರುತ್ಥಾನವು ನಮ್ಮ ನಂಬಿಕೆಯ ಕೇಂದ್ರಬಿಂದು ಹಾಗೂ ದೇವರೊಂದಿಗಿನ ಸಂಬಧವಾಗಿರುತ್ತದೆ (1 ಕೊರಿಂಥ 15:1-4). ವಾರದ ಮೊದಲನೆಯ ದಿನ ಕರ್ತನ,[1] ಮೇಜಿನ ಸುತ್ತಲೂ ಸೇರಿ ಬರುವಾಗ, ಕರ್ತನ ಮರಣ ಪುನರುತ್ಥಾನಗಳ ನೆನಪನ್ನು ಮಾಡುತ್ತೇವೆ. ಈಗ ಪುನರುತ್ಥಾನಕ್ಕೆ ಹೆಚ್ಚು ಗಮನ ನೀಡೋಣ. "ಪುನರುತ್ಥಾನದ ಗುರಿತೇನು?" ಎಂಬ ಅಂಶವನ್ನು ನೋಡೋಣ. "ಈ ಘಟನೆಯು ಏನನ್ನು ಪ್ರಕಟಿಸುತ್ತದೆ?" ಈ ಕೆಳಗೆ ಕೆಲವು ಅಂಶಗಳನ್ನು ನೀಡಲಾಗಿದೆ.

## ಯೇಸು ದೇವರ ಮಗನಾಗಿದ್ದಾನೆ

ಪುನರುತ್ಥಾನವು ಯೇಸುವಿನ ದೈವತ್ವಕ್ಕೆ ಸಂಕೇತವಾಗಿದೆ ರೋಮಾಪುರ 1:4ರಲ್ಲಿ, "ಆತನು ವಂಶಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನೂ, ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತಮೇಲೆ ಜೀವಿತನಾಗಿ ಎದ್ದು ಬಂದಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ." ಪುನರುತ್ಥಾನವು ಯೇಸುವನ್ನು ದೇವರ ಮಗನೆಂದು ನಿರೂಪಿಸುತ್ತದೆ.

ಪುನರುತ್ಥಾನದ ಮುಂಜಾನೆ ಆತನನ್ನು ಸಂಧಿಸಿದವರಲ್ಲಿ, ಆತನಿಗೆ ಸುಗಂಧ ದ್ರವ್ಯವನ್ನು ಹಾಕುವುದಕ್ಕೆ ಬಂದಂತ ಸ್ತ್ರೀಯರು ಮೊದಲಿಗರಾಗಿದ್ದಾರೆ. ಮಗ್ದಲದ ಮರಿಯಳು ಇತರರಿಗಿಂತ ಮುಂದಾಗಿ ಪೇತ್ರ ಯೋಹಾನರ ಬಳಿಗೆ ಹೋದಳು. ಅವಳ ಮಾತನ್ನು ಕೇಳಿದ ತಕ್ಷಣ ಅವರು ಸಮಾಧಿಯ ಬಳಿಗೆ ಓಡಿಬಂದರು ಯೋಹಾನನು ಆ ಸಮಾಧಿಯನ್ನು ನೋಡಿ ದಾಗ ನಂಬಿದನೆಂದು ನಂತರದಲ್ಲಿ ತಿಳಿಸಿರುವನು. ಈ ಹಿಂದೆ ಅವನು ಪೇತ್ರನೊಂದಿಗೆ ಏನನ್ನು ನಂಬಬೇಕು ಎಂದು ತಿಳಿಯದವನಾಗಿ ತೋಟದೊಳಗೆ ಬಂದಿದ್ದನು. ನಂತರ ಅವನು ಸಮಾಧಿಯೊಳಗೆ ಹೋಗಿ ನೋಡಿದ ನಂತರ:

> ಸೀಮೋನ ಪೇತ್ರನು ಅವನ ಹಿಂದೆ ಬಂದು ಸಮಾಧಿಯೊಳಕ್ಕೆ ಹೋಗಿ ಆ ನಾರು ಬಟ್ಟೆಗಳು ಬಿದ್ದಿರುವದನ್ನೂ ಆತನ ತಲೆಯ ಮೇಲಿದ್ದ ಕೈಪಾವುಡವು ಆ ನಾರುಬಟ್ಟೆಗಳ ಕೂಡ ಇರದೆ ಸುತ್ತಿ ಒಂದು ಕಡೆಯಲ್ಲಿ ಬೇರೆ ಇರುವದನ್ನೂ ನೋಡಿದನು.[2] ಆಗ ಸಮಾಧಿಯ ಬಳಿಗೆ ಮೊದಲು ಬಂದಿದ್ದ ಆ ಮತ್ತೊಬ್ಬ ಶಿಷ್ಯನು[3] ಸಹ ಒಳಕ್ಕೆ ಹೋಗಿ ನೋಡಿ ನಂಬಿದನು (ಯೋಹಾನ 20:6-8).

ಯಾವ ಸಂಗತಿಯನ್ನು ಯೋಹಾನನು ಕಂಡು ನಂಬಿದನು? "ಆತನ ತಲೆಯ ಬಳಿಯಲ್ಲಿ ಮಡಚಿ ಇಟ್ಟಿದ ಮುಖದ ಪಾವುಡವನ್ನು ಹಾಗೂ ನಾರಿನ ಮಡಿಯನ್ನು ಕಂಡಿದ್ದನು. ಅದು ತನಗೆ ತಾನೇ ಆ ಸ್ಥಿತಿಯಲ್ಲಿತ್ತು." ಒಂದು ವೇಳೆ ಮನುಷ್ಯರು ಆ ದೇಹವನ್ನು ತೆಗೆದುಕೊಂಡು ಹೋಗಿದ್ದರೆ,[4] ಆತನ ಉಡುಪುಗಳನ್ನು ಆ ವಿಧದಲ್ಲಿ ಇಡಲು ಸಮಯವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಮನುಷ್ಯರಲ್ಲಿ ಅಸಾಧ್ಯವಾದದ್ದನ್ನು ದೈವೀಕವಾಗಿ ಸಾಧ್ಯವಾದ್ದನ್ನು ಕಂಡನು. ಯೇಸು ಮುಂತಿಳಿಸಿದ್ದ ಪುನರುತ್ಥಾನವನ್ನು ಕಂಡನು (ಮತ್ತಾಯ 16:21; 17:23; 20:19; ಮಾರ್ಕ 8:31; 9:31; 10:34; ಲೂಕ 9:22; ಯೋಹಾನ 2:19).

ನಾವೆಲ್ಲರೂ ಈ ಸಾಕ್ಷಿಗಳನ್ನು ಪರಿಶೀಲಿಸುವುದಾದರೆ, ಯೋಹಾನನಲ್ಲಿ ಉಂಟಾದ ನಂಬಿಕೆ ನಮ್ಮಲ್ಲೂ ಉಂಟಾಗುತ್ತದೆ. ಆತನು ಮರಣದಿಂದ ಎದ್ದು ಬಂದನು ಎಂಬುದಕ್ಕೆ ಅನೇಕ ನೂರಾರು ಸಾಕ್ಷಿಗಳಿವೆ (1 ಕೊರಿಂಥ 15:4-8).

ಶಿಷ್ಯರಲ್ಲಿ ಉಂಟಾದ ಬದಲಾವಣೆಗಳೇ, ಪ್ರಮುಖ ಸಾಕ್ಷಿಗಳಾಗಿವೆ. ಯೇಸುವನ್ನು ಹಿಡಿದು ವಿಚಾರಣೆಗೆ ಒಳಪಡಿಸಿದಾಗ, ಶಿಷ್ಯರ ವರ್ತನೆಗಳಿಂದ ಜನರ ಮೇಲೆ ಯಾವ ಪ್ರಭಾವವು ಉಂಟಾಗಿರಲಿಲ್ಲ. ಆದರೆ ಅವರು ಧೈರ್ಯಗೊಂಡಿರಲಿಲ್ಲ, ಅವರು ಜೀವನದಿಂದ ಓಡಿ ಹೋಗಿರಲಿಲ್ಲ, ಅಪಾಯದಿಂದ ದೂರ ಸಹ ಇರಲಿಲ್ಲ. ಪೇತ್ರನು ಯೇಸುವನ್ನು ಅರಿಯನೆಂದು ಹೇಳಿದನಷ್ಟೆ. ಪುನರುತ್ಥಾನದ ನಂತರ, ಇದೇ ಜನರು ಯೇಸುವಿನ ಕುರಿತಾಗಿ ಧೈರ್ಯವಾಗಿ ಪ್ರಸಂಗ ಮಾಡಿದ್ದರು. ಈ ಕುರಿತ ಅವರ ಸಾಕ್ಷಿಯು, ಹೊಸ ಒಡಂಬಡಿಕೆಯಲ್ಲಿ ಪ್ರಚಾರಪಟ್ಟಿರುತ್ತದೆ.

ಅವರು ಯಾವ ವಿಚಾರದಲ್ಲಿ ನಿಸ್ಸಂದೇಹವಾಗಿದ್ದರು? ಯಾರು *ಜೀವಿತನಾಗಿ* ಎಂಬ ವಿಚಾರದಲ್ಲಿ ಈ ಸಂಗತಿಯು ಶಿಷ್ಯರನ್ನು ಬದಲಾವಣೆ ಮಾಡಿತ್ತು. ಅವರನ್ನು ಸೆರೆಮನೆಗೆ ಹಾಕಿ, ಹೊಡೆದು, ಕಲ್ಲುಗಳಿಂದ ಹೊಡೆದು, ಕೊಂದು ಹಾಕಿದ್ದರೂ, ಅವರ ನಂಬಿಕೆ ದೃಢವಾಗಿಯೇ ಇತ್ತು. ಬಲಹೀನ, ನಡುಗುವ, ನಂಬಿಕೆ ಇಲ್ಲದವರು, ಪ್ರಪಂಚವು ಕಾಣದೆ ಇದ್ದ ಶಕ್ತಿಶಾಲಿಗಳನ್ನು ಅವರಲ್ಲಿ ಕಂಡಿತು, ಅವರ ಸಂದೇಶದ ನಿಮಿತ್ತ ರೋಮಾ ಸಾಮ್ರಾಜ್ಯವು ನಡುಗಿ ಹೋಯಿತು, ಪುನರುತ್ಥಾನವನ್ನು ಹೊರತುಪಡಿಸಿ ಶಿಷ್ಯರ ಕುರಿತು ವಿವರಣೆ ನೀಡಲಾಗದು, ಅವರು ಪುನರುತ್ಥಾನ ಹೊಂದಿದ ಯೇಸುವನ್ನು ನೋಡಿ, ಆ ಸಂಗತಿಯಿಂದ ಬದಲಾಗಿ ಹೋದರು.

ಪುನರುತ್ಥಾನವು ಯೇಸುವನ್ನು ದೈವತ್ವದ ವ್ಯಕ್ತಿಯಿಂದ ನಿರೂಪಿಸದೆ, ಆ ಸತ್ಯವೂ ಇನ್ನು ಸಹ ಮುಂದುವರೆದದೆ.

## ಯೇಸುವಿನ ತ್ಯಾಗವು ಅಂಗೀಕರಿಸಲ್ಪಟ್ಟಿದೆ

ಶಿಲುಬೆಯಲ್ಲಿನ ಯೇಸುವಿನ ಮರಣವನ್ನು ದೇವರು ಅಂಗೀಕರಿಸಿದ್ದಾರೆ ಎಂಬುದನ್ನು ಪುನರುತ್ಥಾನವು ನಿರೂಪಿಸುತ್ತದೆ. ಶಿಲುಬೆಯ ಕ್ರೈಸ್ತರ ಪ್ರಮುಖ ಬಿಂದುವಾಗಿದೆ. "ಶಿಲುಬೆಯ ಮೂಲಕ" ನಾವು ದೇವರೊಂದಿಗೆ ಸಂಧಾನವಾಗಿದ್ದೇವೆ (ಎಫೆಸ 2:16). ಯೇಸುವಿನ ತ್ಯಾಗದ ಮೂಲಕ, ದೇವರ ನೀತಿಗೆ ಸಂತೃಪ್ತಿಯಾಗಿದೆ,[5] ನಾವುಗಳು ನಿತ್ಯತ್ವದ ನಿರೀಕ್ಷೆಯನ್ನು ಹೊಂದಿದ್ದೇವೆ. "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುವನ್ನೆ ಅರಿಯಬೇಕೆಂದು ತೀರ್ಮಾನಿಸಿದ್ದೇನೆ" (1 ಕೊರಿಂಥ 2:2). ಪ್ರತಿವಾರ ಕರ್ತನ ಮೇಜಿನ ಸುತ್ತಲೂ ಸೇರಿ ಬರುವಾಗ "ಕರ್ತನ ಮರಣವನ್ನು ಪ್ರಕಟಪಡಿಸುತ್ತೇವೆ" (1 ಕೊರಿಂಥ 11:26).

ಒಂದು ವೇಳೆ ಯೇಸು ಪುನರುತ್ಥಾನವಾಗದಿದ್ದರೇ, ಶಿಲುಬೆಯ ಉದ್ದೇಶವನ್ನು ಅರಿಯುವಲ್ಲಿ ಸಂಶಯ ಉಂಟಾಗುತ್ತಿತ್ತು. ನಮ್ಮ ಪಾಪಗಳ ನಿಮಿತ್ತ ಆತನು ಸತ್ತನು, ಮತ್ತು ಪುನರುತ್ಥಾನವು ನಮಗೆ ರಕ್ಷಣೆಯನ್ನು ನೀಡಿರುತ್ತದೆ. ಆದ್ದರಿಂದ ಪೌಲನು: "ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ *ಒಪ್ಪಿಸಿಕೊಟ್ಟು* ನಮಗೆ *ನೀತಿವಂತರೆಂಬ ನಿರ್ಣಯವು* ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು" (ರೋಮಾಪುರ 4:25; ಒತ್ತಿ ಹೇಳಿದ್ದು ನನ್ನದು).

## ನಾವು ರಕ್ಷಿಸಲ್ಪಡಬಹುದು

ದೇವರು ಯೇಸುವಿನ ತ್ಯಾಗವನ್ನು ಅಂಗೀಕಾರ ಮಾಡಿಕೊಂಡಿರುವದರಿಂದ ನಮಗೆ ರಕ್ಷಣೆ ಉಂಟಾಗಿದೆ! ಪುನಃ ಪಾಪದಿಂದ, ನೂತನ ಜೀವಿತಕ್ಕೆ ಎಬ್ಬಿಸಲ್ಪಟ್ಟಿದ್ದೇವೆ ಎಂದು ಪುನರುತ್ಥಾನವು ಪ್ರಕಟಿಸುತ್ತದೆ.

*ಆತ್ಮೀಕವಾಗಿ* ಆತನು ಸ್ವಸ್ಥಪಡಿಸುವನು ಎಂಬುದಕ್ಕೆ, ಒಂದು ಸಾರಿ ಯೇಸು ದೈಹೀಕ ವಾದ *ಸ್ವಸ್ಥತೆಯನ್ನು* ಮಾಡಿದನು (ನೋಡಿ ಮತ್ತಾಯ 9:6). ನೂತನ ಜೀವಿತಕ್ಕಾಗಿ ಉಂಟಾಗಿರುವ ನಮ್ಮ ಪುನರುತ್ಥಾನಕ್ಕೂ, ಯೇಸುವಿನ *ದೈಹಿಕವಾದ* ಪುನರುತ್ಥಾನಕೂ

ಸಂಬಂಧವಿದೆ ಎಂದು ಸತ್ಯವೇದವು ಪ್ರಕಟಿಸುತ್ತದೆ. ಪೌಲನು ರೋಮಾಪುರದ ಕ್ರೈಸ್ತರಿಗೆ ಬರೆದು,

> ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರ ರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಆಕ್ಯವಾಗುವೆವು. ಪಾಪಧೀನಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರುವಂತೆ ನಮ್ಮ ಪೂರ್ವಸ್ವಭೀವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ ... (ರೋಮಾಪುರ 6:4-6).

ಎಫೆಸದವರ ಪರಿವರ್ತನೆಯ ಕುರಿತು ಪೌಲನು: "ಪ್ರೀತಿಯನ್ನಿಟ್ಟು ಅಪರಾಧಗಳ [ದೇವರು] ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು *ಕ್ರಿಸ್ತನೊಂದಿಗೆ* ಬದುಕಿಸಿದನು" (ಎಫೆಸ 2:5; ಒತ್ತಿ ಹೇಳಿದ್ದು ನನ್ನದು). "ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬುದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ. ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬದು ಕ್ರಿಸ್ತನಲ್ಲಿ ತೋರಿಬಂದಿದೆ, *ಹೇಗಂದರೆ ಆತನು ಸತ್ತಿದ್ದ ಕ್ರಿಸ್ತನನ್ನು*" (1:19ಬಿ, 20ಎ; ಒತ್ತಿ ಹೇಳಿದ್ದು ನನ್ನದು).

## ಜೀವಿಸುವ ರಕ್ಷಕನು ನಮಗಿದ್ದಾನೆ

ರಕ್ಷಿಸಲ್ಪಟ್ಟಂಥ ನಾವುಗಳು ಕ್ರೈಸ್ತ ಜೀವಿತವನ್ನು ಜೀವಿಸಲು ಸಹಾಯದ ಅಗತ್ಯವನ್ನು ಹೊಂದಿರುತ್ತೇವೆ. ಆದ್ದರಿಂದ, ಪುನರುತ್ಥಾನದ ಮೂಲಕವಾಗಿ "ನಮಗೋಸ್ಕರ ಬಿನ್ನಹ ಮಾಡುವ ರಕ್ಷಕನು ನಮಗಿದ್ದಾನೆ" (ಇಬ್ರಿಯ 7:25). ಸತ್ತ ಕ್ರಿಯೆಗಳಿಗೆ ಸಂಬಂಧ ಹೊಂದದೆ, ಜೀವಿಸುವ ಕ್ರಿಯೆಗೆ ಸಂಬಂಧ ಹೊಂದಿದ್ದೇನೆ.

ಯೇಸು ನಮ್ಮೊಂದಿಗೆ ಯಾವಾಗಲೂ ಇರುತ್ತೇನೆ ಎಂಬ ವಾಗ್ದಾನವನ್ನು ಮಾಡಿರುವನು ನಾವು ಒಟ್ಟಾಗಿ ಸೇರಿ ಬರುವಾಗ, ಆತನು ನಮ್ಮ ಸಂಗಡ ಇರುವನೆಂಬ ನಿರೀಕ್ಷೆ ಯನ್ನು ನೀಡಿರುವನು (ಮತ್ತಾಯ 28:20). "ಆತನು ನಂಬಿಗಸ್ಥನಾದ ಕರುಣೆವುಳ್ಳ ಮಹಾಯಾಜಕನೆಂದು ಇಬ್ರಿಯ ಪುಸ್ತಕ ತಿಳಿಸುತ್ತದೆ. ಶೋಧನೆ ಉಂಟಾಗುವಾಗ ನಮಗೆ ಆತನೇ ಸಹಾಯಕನು" (2:17; 4:15; 2:18). ಆತನ ಮೂಲಕ, "ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ" (ಇಬ್ರಿಯ 4:16).

"ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು ಮತ್ತು ನಿಶ್ಚಯವಲ್ಲವೇ" (ರೋಮಾಪುರ 5:10). ಜೀವಿಸುವ ರಕ್ಷಕನಿಗಾಗಿ ದೇವರಿಗೆ ಸ್ತೋತ್ರ!

## ಒಂದು ದಿನವನ್ನು ನಿಗಧಿಪಡಿಸಲಾಗಿದೆ

ಒಂದು ದಿನವನ್ನು ವಿಶೇಷವಾದ ಉದ್ದೇಶಕ್ಕಾಗಿ ನಿಗಧಿಪಡಿಸಲಾಗಿದೆ ಎಂದು ಪುನರುತ್ಥಾನವು ಪ್ರಕಟಿಸುತ್ತದೆ. "ಒಂದು ದಿನ ವನ್ನು ವಿಶೇಷವಾದ ಉದ್ದೇಶಕ್ಕಾಗಿ ನಿಗಧಿಪಡಿಸಲಾಗಿದೆ" ಎಂದು ನಾನು ಹೇಳಿದರೆ ವಿಶಿಷ್ಟ ಕ್ರೈಸ್ತರು ಆಚರಿಸಲು ಮೀಸಲಿಟ್ಟ ಒಂದು ದಿನ ಅಥವಾ ಎರಡು ದಿನಗಳು ಎಂಬ ಅರ್ಥವನ್ನು ನಾನು ನೀಡುತ್ತಿಲ್ಲ (ಗಮನಿಸಿ

ಗಲಾತ್ಯ 4:10). ಅಥವಾ ವಾರದ ಏಳನೆಯ ದಿನವನ್ನು ಸೂಚಿಸುತ್ತಿರುವದಿಲ್ಲ, (ಸಬ್ಬತ್) ಎಂಬುದು ಅದು ಹಳೇ ಒಡಂಬಡಿಕೆಯಲ್ಲಿ ನಿಗಧಿಮಾಡಿದ ದಿನ (ವಿಮೋಚನಕಾಂಡ 20:8-11; ಧರ್ಮೋಪದೇಶಕಾಂಡ 5:12-15).

"ಭಾನುವಾರ" ಎಂಬ ವಾರದ ಮೊದಲನೆಯ ದಿನದ ಬಗ್ಗೆ ಹೇಳುತ್ತಿದ್ದೇನೆ. ಆದಿ ಸಭೆಯವರು ಆರಾಧನೆಗಾಗಿ - ಅಂದಕೆ ಕರ್ತನ ಮೇಜಿನ (ಅಪೊಸ್ತಲರ ಕೃತ್ಯಗಳು 20:7) ಆಚರಣೆಗಾಗಿ ಮತ್ತು ಕಾಣಿಕೆ ನೀಡಲು (1 ಕೊರಿಂಥ 16:2) ಆ ದಿನದಂದು ಸೇರಿ ಬರುತ್ತಿದ್ದರು. ಅಪೊಸ್ತಲನಾದ ಯೋಹಾನನು ಆ ದಿನವನ್ನು "ಕರ್ತನ ದಿನವೆಂದು" ಕರೆದಿರುವನು (ಪ್ರಕಟಣೆ 1:10).

ವಾರದ ಮೊದಲನೆಯ ದಿನ ಕ್ರೈಸ್ತರಿಗೆ ಏಕೆ ಪ್ರಮುಖವಾಗಿದೆ? ಯಾಕೆಂದರೆ ಕರ್ತನು ಆ ದಿನದಂದು[6] *ಪುನರುತ್ಥಾನವಾದನು.* "*ಮತ್ತು ವಾರದ ಮೊದಲನೆಯ ದಿನದ ಬೆಳ್ಳಿಗೆ* ಹೊತ್ತು ಮೂಡುವಾಗ ಅವರು ಸಮಾಧಿಯ ಬಳಿಗೆ ಬಂದರು" (ಮಾರ್ಕ 16:2; ಒತ್ತಿ ಹೇಳಿದ್ದು ನನ್ನದು). "ಬೆರಗಾಗಬೇಡಿರಿ ಶಿಲುಬೆಗೆ ಹಾಕಲ್ಪಟ್ಟಿದ್ದ ನಜರೇತಿನ ಯೇಸುವನ್ನು ಹುಡುಕುತ್ತಿರಲ್ಲವೇ. ಆತನು ಜೀವಿತನಾಗಿ ಎದ್ದಿದ್ದಾನೆ; ಇಲ್ಲಿ ಇಲ್ಲ. ಆತನನ್ನು ಇಟ್ಟಿದ್ದ ಸ್ಥಳವು ಇದೇ, ನೋಡಿರಿ" (ಮಾರ್ಕ 16:6) ಎಂದು ದೇವದೂತನು ಅವರಿಗೆ ಹೇಳಿದನು. ಆದ್ದರಿಂದ *ಪ್ರತಿವಾರದ* ಮೊದಲನೆಯ ದಿನದ ಸೂರ್ಯೋದಯವು ಕ್ರೈಸ್ತರಿಗೆ "ಪುನರುತ್ಥಾನದ ಮುಂಜಾನೆಯಾಗಿದೆ."

## ನಾವುಗಳು, ಸಹ, ಪುನರುತ್ಥಾನ ಹೊಂದುವೆವು

ನಂತರದಲ್ಲಿ ಪುನರುತ್ಥಾನದ ಕುರಿತ ಆಶ್ಚರ್ಯಕರವಾದ ಮತ್ತೊಂದು ಸಂದೇಶಕ್ಕೆ ಬರುತ್ತೇವೆ: ಯೋಬನು ಕೇಳುವಂತೆ "ಒಬ್ಬನು ಸತ್ತರೆ, ಪುನಃ ಅವನು ಏಳುವನೇ?" (ಯೋಬ 14:14). ಹೌದು ನಾವುಗಳು ಒಂದು ದಿನ ಮರಣದಿಂದ ಏಳುತ್ತೇವೆ. ಯೇಸು ಎದ್ದಿರುವದರಿಂದ, "ನಾವು ಏಳುತ್ತೇವೆ - ಎಂದು ದೇವರು ತಿಳಿಸುತ್ತಾನೆ!" 1 ಕೊರಿಂಥ 15ರಲ್ಲಿ ಈ ಸತ್ಯವನ್ನು ದೃಢಕರಿಸಲಾಗಿದೆ:

> ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು. ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು. ಕ್ರಿಸ್ತನು ಪ್ರಥಮ ಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು. ಆ ಮೇಲೆ ಆತನು ಬೇರೆ ಎಲ್ಲಾ ದೊರೆತನವನ್ನು ಎಲ್ಲಾ ಅಧಿಕಾರವನ್ನು ಬಲವನ್ನೂ ನಿವೃತ್ತಿಮಾಡಿ ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುವಾಗ ಸಮಾಪ್ತಿ. ಯಾಕೆಂದರೆ ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿ ಕೊಳ್ಳುವ ತನಕ ರಾಜ್ಯವನ್ನಾಳುವದು ಅವಶ್ಯ. ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವದು (ವಚನಗಳು 20-26).

"ಆತನ ಧ್ವನಿಯನ್ನು" ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವರಿಗೆ "ಜೀವಕ್ಕಾಗಿ ಪುನರುತ್ಥಾನವಾಗುವದು"; ಕೆಟ್ಟದ್ದನ್ನು ನಡಿಸಿದವರಿಗೆ "ತೀರ್ಪಿಗಾಗಿ ಪುನರುತ್ಥಾನವಾಗುವದು" (ಯೋಹಾನ 5:29) - ನಾವೆಲ್ಲರೂ ಪುನಃ ಬದುಕುತ್ತೇವೆ. ಮರಣವು ಇನ್ನೆಂದಿಗೂ ಅಡ್ಡಗೋಡೆಯಾಗಿರದೆ, ಬಾಗಿಲಾಗಿರುತ್ತದೆ. ಪುನರುತ್ಥಾನವು ಇದನ್ನೆ ದೃಢಪಡಿಸುತ್ತದೆ!

## ದೇವರು ತನ್ನ ಮಾತನ್ನು ನೆರವೇರಿಸುತ್ತಾನೆ

ಪ್ರತಿ ಮನುಷ್ಯನು ಕಲಿಯಲೇಬೇಕಾದ ಇನ್ನೊಂದು ಸತ್ಯವೇನೆಂದರೆ: ದೇವರು ತನ್ನ ಮಾತನ್ನು ನೆರವೇರಿಸುವನು ಎಂದು ಪುನರುತ್ಥಾನವು ಸೂಚನೆಯನ್ನು ನೀಡುತ್ತದೆ. "ದೇವರು ಹೇಳುವದನ್ನು ಮಾಡುತ್ತಾನೆ, ಹಾಗೂ ಮಾಡುವದನ್ನು ಹೇಳುತ್ತೇನೆ!"

ಪುನರುತ್ಥಾನದ ಸಂದೇಶವು, ಆತನ ಕೇಳುಗರಲ್ಲಿ ಪ್ರಭಾವ ಉಂಟುಮಾಡಿದೆ. ಪ್ರಮುಖವಾಗಿ ದೇವಾಲಯದ ವಿಚಾರದಲ್ಲಿ: "ನಾನು ಮೂರು ದಿನದಲ್ಲಿ ಅದನ್ನು ಎಬ್ಬಿಸುವೆನು ಅಂದನು"; "ಆದರೆ ಆತನು ತನ್ನ ದೇಹವೆಂಬ ದೇವಾಲಯದ ವಿಷಯವಾಗಿ ಆ ಮಾತನ್ನು ಹೇಳಿದ್ದನು" (ಯೋಹಾನ 2:19, 21). ಕಾಯಫನ ಮುಂದೆ ಯೇಸು ವಿಚಾರಣೆಗೆ ಒಳಗಾದ ಸಂದರ್ಭದಲ್ಲಿ, ಆತನ ವಿರೋಧಿಗಳು ಈ ಹೇಳಿಕೆಯನ್ನು ನೀಡಿದ್ದಾರೆ (ಮತ್ತಾಯ 26:61). ಯೇಸು ಶಿಲುಬೆಯಲ್ಲಿರುವಾಗ, "ಜನರು ದೇವಾಲಯವನ್ನು ಕೆಡವಿ, ಮೂರು ದಿನಗಳಲ್ಲಿ ಕಟ್ಟುವವನೇ, ನಿನ್ನನ್ನು ನೀನು ರಕ್ಷಿಸಿಕೋ" ಎಂದು ಕೂಗಿದರು (ಮತ್ತಾಯ 27:40ಎ).[7]

ಯೇಸುವಿನ ವಿರೋಧಿಗಳು ಆತನ ಪ್ರವಾದನೆಗಳನ್ನು ನಂಬಲಿಲ್ಲ. ಆದರೂ ಆತನ ಮಾತುಗಳು ನೆರವೇರಿದವು. ಆತನ ದೇಹ - ಅಂದರೆ ಲೌಕಿಕ ದೇಹ ಶಿಲುಬೆಯಲ್ಲಿ ಮರಣವನ್ನು ಹೊಂದಿ, ಮೂರನೆಯ ದಿನ ಆ ದೇಹಕ್ಕೆ ಪುನರುತ್ಥಾನವಾಯಿತು. ಆತನ ಹೇಳಿದ ಮಾತು ನಿಜವಾದ್ದರಿಂದ, ನಂಬಲರ್ಹವಾಗಿದೆ!

## ಮುಕ್ತಾಯ

ಕೆಲವರು ಪುನರುತ್ಥಾನವನ್ನು ನಂಬುವದಾದರು - ವರ್ಷಕ್ಕೆ ಒಂದಾವರ್ತಿ ಮಾತ್ರ ಅದಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತಾರೆ. ಅದೇ ಸಮಯದಲ್ಲಿ ಪುನರುತ್ಥಾನದ ಕುರಿತ ಮಹಾಸತ್ಯಗಳನ್ನು ಅಲ್ಲಗಳೆಯುತ್ತಾರೆ:

- ಪುನರುತ್ಥಾನವು ಯೇಸುವು ದೇವರ ಮಗನೆಂದು ನಿರೂಪಿಸುತ್ತದೆ - ಆದರೆ ಅನೇಕರು ಆತನ ದೈವತ್ವವನ್ನು ಒಪ್ಪಿಕೊಳ್ಳುವದಿಲ್ಲ.
- ಪುನರುತ್ಥಾನವು ದೇವರ ಕೋಪವನ್ನು ಶಮನಮಾಡಿರುತ್ತದೆ - ಆದರೆ ಅನೇಕರು ಪಾಪವಿಲ್ಲವೆಂದು ಹೇಳಿ, ದೇವರು ಪಾಪಿಗಳನ್ನೇ ಶಿಕ್ಷಿಸಬೇಕು ಎಂದು ವಾದಿಸುತ್ತಾರೆ.
- ಪುನರುತ್ಥಾನವು ರಕ್ಷಣೆಯನ್ನು ದೃಢಪಡಿಸಿ, ಯೇಸುವಿನ ಮರಮ ಹೂಣಿಡುವಿಕೆ ಹಾಗು ಪುನರುತ್ಥಾನದಲ್ಲಿ ನಂಬಿಕೆಯ ಸ್ಥಾನವನ್ನು ಮೂಡಿಸುತ್ತದೆ (ಗಲಾತ್ಯ 3:26, 27) - ಆದರೆ ಕೆಲವರು ದೀಕ್ಷಾಸ್ನಾನವನ್ನು ಅಲ್ಲಗಳೆಯುತ್ತಾರೆ.
- ನಾವು ಜೀವಿಸುವ ರಕ್ಷಕನನ್ನು ಹೊಂದಿ, ಆತನು ನಮಗಾಗಿ ಮಧ್ಯವರ್ತಿಯಾಗಿರುವನು ಎಂದು ಪುನರುತ್ಥಾನವು ನಿರೂಪಿಸುತ್ತದೆ - ಆದರೆ ದೇವರು ವ್ಯಯಕ್ತಿಕ ಬಲವನ್ನು ನೀಡುವನೆಂದು ಅನೇಕರು ನಂಬುವದಿಲ್ಲ.
- ಆರಾಧನೆಗಾಗಿ ವಾರದ ಮೊದಲನೆಯ ದಿನವನ್ನು ನಿಗಧಿಪಡಿಸಲಾಗಿದೆ ಎಂದು ಪುನರುತ್ಥಾನವು ರೂಪಿಸುತ್ತದೆ - ಆದರೆ ಕೆಲವರು ವರ್ಷದಲ್ಲಿ ಕೆಲವೇ ದಿವಸಗಳನ್ನು ಇದಕ್ಕಾಗಿ ಮೀಸಲಿಟ್ಟಿದ್ದಾರೆ.
- ಒಂದು ದಿನ ನಾವುಗಳು ಮರಣದಿಂದ ಏಳುವವು ಎಂದು ಪುನರುತ್ಥಾನವು ತಿಳಿಸುತ್ತದೆ - ಆದರೆ ಅನೇಕರು ಈ ಬೋಧನೆಯನ್ನು ನಿರಾಕರಿಸಿದ್ದಾರೆ.

ಹಲವಾರು ವರ್ಷಗಳ ಹಿಂದೆ, ಬ್ರಿಟನ್ನಿನ 760 ಹಳೆಯದಾದ ಅತಿ ದೊಡ್ಡ ಗಾತಿಕ್ ದೇವಾಲಯವು ಬೆಂಕಿಗೆ ಅಹುತಿಯಾಯಿತು, ಅಲ್ಲಿಗೆ ಅನೇಕ ಪ್ರವಾಸಿಗಳು ಬರುತ್ತಿದ್ದ ವಾಡಿಕೆ

ಇತ್ತು. ಆದರೆ ಆ ಬೆಂಕಿಯು ಅನಾಹುತಕ್ಕೆ ಸಮನಾದ ಇನ್ನೊಂದು ಸಂಗತಿಯು ಆ ಕಟ್ಟಡದಲ್ಲಿ ಜರುಗಿತ್ತು. "The Rev. David Jenkins" ಎಂಬಾತನು "Bishop of Durham" ನನ್ನಾಗಿ ನೇಮಕ ಮಾಡಲಾಗಿತ್ತು. ಅವನು ಯೇಸುವಿನ ಜನನವನ್ನು ಆತನ ಪುನರುತ್ಥಾನವನ್ನು ನಂಬುವವನಲ್ಲ ಎಂದು ಸಾರ್ವಜನಿಕ ಹೇಳಿಕೆಯನ್ನು ನೀಡಿದ್ದನು![8]

ಪುನರುತ್ಥಾನವನ್ನು ನಂಬುವದಾದರೆ? ಅದನ್ನು ಪ್ರಕಟಿಸು! ಹಾಗೂ ಜೀವಿಸು!

ಪುನರುತ್ಥಾನದಲ್ಲಿ ನಂಬುವದಾದರೆ ನಾಚಿಕೆ ಪಡದೆ ದೀಕ್ಷಾಸ್ನಾನ ಮಾಡಿಸಿಕೋ.[9] ನಿಜವಾದ ಯೇಸುವಿನ ದೇಹವನ್ನು ದೇವರ ಶಕ್ತಿಯು ಸ್ಪರ್ಷಿಸಿದ ಹಾಗೆ, ನಿನ್ನನ್ನು ಸ್ಪರ್ಷಿಸಿ, ದೇವರು ಜೀವ ನೀಡುತ್ತಾನೆ - ಆತನ ಚಿತ್ತಕ್ಕೆ ಒಳಗಾಗು.

---

ಟಿಪ್ಪಣೆಗಳು

[1]ಯಾವಾಗ ಯೇಸು ಕರ್ತನ ಭೋಜನ ಪ್ರತಿಷ್ಟಿಸಿದನೋ, ಆತನು ತನ್ನ ಮರಣವನ್ನು ಸಾರುತ್ತದೆಂದು ಒತ್ತಿ ಹೇಳಿದ್ದಾನೆ (1 ಕೊರಿಂಥ 11:23-26); ಆದರೆ ಅಲ್ಲಿ ಆ ಊಟಕ್ಕೂ ಮತ್ತು ಪುನರುತ್ಥಾನಕ್ಕೂ ಸಂಬಂಧವಿದೆ. ಯೇಸು ವಾರದ ಮೊದಲನೆ ದಿನ ಎದ್ದಿರುವದರಿಂದ (ಮತ್ತಾಯ 28:1-6), ಸಭೆಯು ಮೊದಲನೆ ದಿನ ಕೂಡಿ ಬರುತ್ತದೆ - ವಿಶೇಷವಾಗಿ ಕರ್ತನ ಭೋಜನ ಹೊಂದುವದಕ್ಕಾಗಿ ಬರುತ್ತಾರೆ (ಅಪೊಸ್ತಲರ ಕೃತ್ಯಗಳು 20:7; ನೋಡಿರಿ 1 ಕೊರಿಂಥ 16:1, 2). [2]"ಯೇಸು ಪ್ರೀತಿಮಾಡಿದ ಶಿಷ್ಯನೊಂದಿಗೆ" ಗುರುತಿಸಿಕೊಂಡಿರುವದರಲ್ಲಿ ಪೇತ್ರನು ಒಬ್ಬನಾಗಿದ್ದಾರೆ (ಯೋಹಾನ 20:2), ಯೋಹಾನನು ಆ ರೀತಿಯಲ್ಲಿ ತನ್ನನ್ನು ತಾನೇ ಗುರುತಿಸಿಕೊಂಡವನೆಂದು ಹೆಚ್ಚಿನ ಜನರು ನಂಬುತ್ತಾರೆ (ನೋಡಿರಿ ಯೋಹಾನ 13:23; 19:26; 21:7, 20). [3]ಗ್ರೀಕ್ ಶಬ್ದ ಹೀಗೆ ಭಾಷಾಂತರಿಸಿದ್ದಾರೆ "ನೋಡಿದರು" "saw" ಕೇವಲ ಆಚರಿಸಿದರು ಎಂದು ಸೂಚಿಸುತ್ತದೆ; ಇದು ಸ್ಪಷ್ಟತೆಯನ್ನು ತಿಳಿಸುತ್ತದೆ. [4]ಕೆಲವರು ಇದನ್ನು ತಮ್ಮದೆಂದು ಹೇಳುವರು, ಓದಿರಿ ಯೋಹಾನ 20:2; ಮತ್ತು ಮತ್ತಾಯ 28:11-15. [5]ಈ ಶಬ್ದವು ಜಯ ಜನರಿಗೆ ಚಿರಪರಿಚಿತವಲ್ಲವೆಂದು ದೇವರ ವಾಕ್ಯವು ಸೂಚಿಸುತ್ತದೆ: "ಪಾಪಯಜ್ಞ" (1 ಯೋಹಾನ 2:2; 4:10). ಈ ಶಬ್ದದ ಕುರಿತು ವಿಸ್ತಾರವಾದ ವಿವರಣಗಾಗಿ, ಈ ಲೇಖನ ನೋಡಿರಿ. "ಯೇಸು ಯಾಕೆ ಶಿಲುಬೆ ಮೇಲೆ ಮರಣ ಹೊಂದಬೇಕಾಗಿತ್ತು?" ಮತ್ತೊಂದು ಭಾಗವನ್ನು ಈ ಪುಸ್ತಕದಲ್ಲಿ ಕಾಣುವಿರಿ. [6]ಸಬ್ಬತ್ ಮತ್ತು ಮೊದಲನೆಯ ದಿನವು ಒಂದು ಅಂಶದಿಂದ ಪ್ರಾರಂಭವಾಗಿ ಅದು ಪವಿತ್ರಗೊಂಡಿದೆ. "Res": ಈ ಶಬ್ದವು ಸಬ್ಬತ್ ದಿನವು ದೇವರ ವಿಶ್ರಾಂತಿ ದಿನವು ಏಳನೇ ದಿನದಂದು ಆಗಿದೆ. ಮೊದಲನೆಯ ದಿನವು ಯೇಸುವಿನ ಪುನರುತ್ಥಾನಗೊಂಡ ದಿನ ಅದು ಪವಿತ್ರವಾಗಿದೆ. [7]Sanhedrin ಎನ್ನುವ ವ್ಯಾಖ್ಯಾನವನ್ನು ಅಪೊಸ್ತಲರ ಕೃತ್ಯಗಳು 6:14ರಲ್ಲಿ ನೋಡಿರಿ. [8]ಈ ದೃಷ್ಟಾಂತವು Dick Marcear, ಅವರ "It's Time to Take a Stand," *Hilltop Reflections*, church bulletin of the Central church of Christ in Amarillo, Texas, 13 April 1986. [9]ಈ ಭಾಗವು ದೀಕ್ಷಾಸ್ನಾನದ ಪ್ರಾಮುಖ್ಯತೆಗಾಗಿ ತೆಗೆದುಕೊಂಡು ಹೇಳಲಾಗಿದೆ. ಯಾರಾದ್ರು ದೇವರಿಂದ ದೂರ ಹೋಗಿದ್ದಿಯಾದರೆ ಅವರು ತಿರುಗಿ ಬರುವದಕ್ಕೆ ನೀವು ಒತ್ತಾಯ ಮಾಡಲು ಇದು ಅವಶ್ಯಕವಾಗಬಹುದು (ಯಾಕೋಬ 5:16; ಅಪೊಸ್ತಲರ ಕೃತ್ಯಗಳು 8:22).